ಸಿ.ಸಿ. ನಂಬ್ರ: **1409/2020** **PW-**2

ದಿನಾಂಕಃ 02.05.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ. ಆರ್.ಎನ್ ರವರಿಂದಃ**

ಮೃತ ಶೇಖರ ಶೆಟ್ಟಿ ನಮ್ಮ ಪಕ್ಕದ ಮನೆಯವರು. ನಾನು ಗುತ್ತಿಗೆದಾರ, ಗ್ರಾಮ ಪಂಚಾಯಿತಿಯ ಸದಸ್ಯರು. ಘಟನಾ ಸ್ಥಳದಿಂದ ಗ್ರಾಮ ಪಂಚಾಯಿತಿ 40 ಮೀಟರ್ ದೂರದಲ್ಲಿರುತ್ತದೆ. ಅದು ಶಾಲೆಯ ಪಕ್ಕದಲ್ಲಿ ಇರುತ್ತದೆ. ಅಲ್ಲಿ ಅಕ್ಕ ಪಕ್ಕ ಬಸ್ಸು ನಿಲ್ದಾಣ, ಪಂಚಾಯಿತಿ ಕಟ್ಟಡ ಇರುತ್ತದೆ. ರಸ್ತೆಯಲ್ಲಿ ಸ್ವಲ್ಪ ತಿರುವು ಇದೆ. ತಿರುವಿನಿಂದ ಬರುವಾಗ ವಾಹನ ಸ್ವಲ್ಪ ಬಲಕ್ಕೆ ಬರುತ್ತದೆ ಎಂದರೆ ಸರಿ. ನಾನು ದ್ವಿ ಚಕ್ರ ವಾಹನ ಮತ್ತು ಕಾರನ್ನು ಚಲಾಯಿಸುತ್ತೇನೆ. ಶಬ್ದ ಕೇಳಿದ ನಂತರ ನಾನು ಸ್ಥಳಕ್ಕೆ ಬಂದಿರುತ್ತೇನೆ. ನಾನು ಬರುವ ವೇಳೆಗೆ ಸುಮಾರು 8-10 ಜನರು ಇದ್ದರು.

ಒಂದು ದ್ವಿ ಚಕ್ರ ವಾಹನ ರಸ್ತೆಯ ಮಧ್ಯದಲ್ಲಿ ಬಿದ್ದಿದ್ದು ಮತ್ತೊಂದು ರಸ್ತೆಯ ಮಣ್ಣಿನ ಅಂಚಿನಲ್ಲಿ ಬಿದ್ದಿತ್ತು. ಸ್ಥಳೀಯರು ಅವರನ್ನು ರಿಕ್ಷಾದಲ್ಲಿ ಕಳುಹಿಸಿರುತ್ತಾರೆ. ಪೊಲೀಸರು ಮರುದಿನ ಸ್ಥಳಕ್ಕೆ ಭೇಟಿ ಮಾಡಿ ಪಂಚನಾಮೆ ಮಾಡಿರುತ್ತಾರೆ ಬೇರೆನೂ ಮಾಡಿಲ್ಲ. ಈ ಪ್ರಕರಣದ ಸಂಬಂಧ ಠಾಣೆಗೆ ನಾನು ಹೋಗಿಲ್ಲ. ಪಂಚನಾಮೆಯಲ್ಲಿ 3 ಹೆಲ್ಮೇಟು ಮತ್ತು ಅಪಘಾತವಾದ ವಿಚಾರ ಬರೆದಿತ್ತು. ಅದು ಎಷ್ಟು ಪುಟ ಇತ್ತು ಯಾರು ಬರೆದಿದ್ದು ಎಂದು ನನಗೆ ತಿಳಿದಿಲ್ಲ. ನೇರಳಕಟ್ಟೆ ಪಂಚಾಯಿತಿಯ ಸದಸ್ಯರಾದ ನಾರಾಯಣ ಶೆಟ್ಟಿರವರು ಸಹಿ ಮಾಡಿರುತ್ತಾರೆ.

ಅಪಘಾತಕ್ಕೀಡಾದವರಿಗೆವಿಮಾ ಪರಿಹಾರ ಸಿಗುತ್ತದೆ ಎಂದು ನನಗೆ ತಿಳಿದಿದೆ. ಹಾಗೆ ವಿಮಾ ಪರಿಹಾರ ಸಿಗಲಿ ಎಂದು ನಾನು ಸಹಾಯ ಮಾಡಿದ್ದು ಎಂದರೆ ಸರಿ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ